+

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23 ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ-154 ರನ್ವಯ ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯದ ಯೋಜನೆಯಡಿ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಿರುವ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ:ಸಕಇ 188 ಪಕವಿ 2022, ದಿನಾಂಕ:18-04-2022.

2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂಖ್ಯೆ: SWD/ ED/ ED6/ 110/ 2022- EDN (713563).

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (1) ರ ಆದೇಶದಲ್ಲಿ 2022-23ನೇ ಆಯವ್ಯಯ ಭಾಷಣದ ಕಂಡಿಕೆ-154 ರನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಇತರೆ ವರ್ಗದ ಮಕ್ಕಳಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು, ಮೊಟ್ಟ ಮೊದಲ ಬಾರಿಗೆ "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ" ಯೋಜನೆಯಡಿ ರಾಜ್ಯದ ಶೈಕ್ಷಣಿಕ ಕೇಂದ್ರಗಳಾದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1,000 ಸಾಮರ್ಥ್ಯದ ಬಹುಮಹಡಿಯ ವಿದ್ಯಾರ್ಥಿ ನಿಲಯ ಸಮುಚ್ಚಯಗಳನ್ನು ರೂ.250.00 ಕೋಟಿಗಳ ಮೊತ್ತದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸುವ ಕಾಮಗಾರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಲೆಕ್ಕಶೀರ್ಷಿಕೆ:4225-01-277-2-03 ರಡಿಯಲ್ಲಿ ರೂ.63.00 ಕೋಟಿ ಮತ್ತು 4225-02-277-2-03 ರಡಿಯಲ್ಲಿ ರೂ.27.00 ಕೋಟಿ ಒಟ್ಟು ರೂ.90.00 ಕೋಟಿಗಳನ್ನು ಲೋಕೋಪಯೋಗಿ ಇಲಾಖೆಗೆ Deposit Cost Contribution ಮಾದರಿಯಲ್ಲಿ ಠೇವಣಿ ಮಾಡಲು, ಬಿಡುಗಡೆಗೊಳಿಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2) ರಲ್ಲಿ ದೀನದಯಾಳ್ ಉಪಾಧ್ಯಾಯ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿ ನಿರ್ವಹಣೆ ಮಾಡಲು ಆವರ್ತಕ ಮತ್ತು ಅನಾವರ್ತಕ ವೆಚ್ಚಗಳಿಗೆ ಅನುದಾನದ ಅವಶ್ಯಕತೆ ಇರುತ್ತದೆ. 100 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಕ್ಕೆ ಆವರ್ತಕ ವೆಚ್ಚಗಳು ರೂ.37,14,500 ಮತ್ತು ಅನಾವರ್ತಕ ವೆಚ್ಚಗಳು ರೂ.42,31,000 ಗಳು ಒಟ್ಟು ರೂ.79,45,500 ಗಳ ಅನುದಾನದ ಅವಶ್ಯಕತೆ ಇರುತ್ತದೆ.

ಅಲ್ಲದೇ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚ ಭರಿಸಲು ತಲಾ ವಿದ್ಯಾರ್ಥಿಗೆ ಮಾಹೆಯಾನ ರೂ.1750 ರಂತೆ ಒಟ್ಟು 100 ವಿದ್ಯಾರ್ಥಿಗಳಿಗೆ 08 ತಿಂಗಳಿಗೆ (ಸೆಪ್ಟಂಬರ್ 2022 ರಿಂದ ಏಪ್ರಿಲ್ 2023 ರವರೆಗೆ) ರೂ.14.00 ಲಕ್ಷಗಳ ಅನುದಾನ ಬೇಕಾಗುತ್ತದೆ. ಒಟ್ಟಾರೆ ಒಂದು ವಿದ್ಯಾರ್ಥಿ ನಿಲಯಕ್ಕೆ ರೂ.93,45,500/- ಗಳ ವೆಚ್ಚ ತಗಲುತ್ತದೆ. ಮೊದಲ ಹಂತದಲ್ಲಿ ಪ್ರತಿ ಜಿಲ್ಲೆಯಲ್ಲಿ 100 ಸಂಖ್ಯಾಬಲದ ಒಂದು ಬಾಲಕ ಮತ್ತು ಒಂದು ಬಾಲಕಿಯರ ವಿದ್ಯಾರ್ಥಿ ನಿಲಯ ಪ್ರಾರಂಭಿಸಲು ಉದ್ದೇಶಿಸಿದ್ದು, 05 ಜಿಲ್ಲೆಗಳಲ್ಲಿ ಒಟ್ಟು 10 ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ವಾರ್ಷಿಕವಾಗಿ ತಗಲುವ ವೆಚ್ಚ ರೂ.934.55 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಈ ಮೇಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, , 2022-23 ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ-154 ರನ್ವಯ ಮೊದಲ ಹಂತದಲ್ಲಿ 200 ಸಂಖ್ಯಾಬಲದ 05 ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯಗಳಿಗೆ ಹುದ್ದೆಗಳನ್ನು ಸೃಜಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಸಕಇ 188 ಪಕವಿ 2022, ಬೆಂಗಳೂರು</u>**
**<u>ದಿನಾಂಕ: 29-10-2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23 ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ-154 ರನ್ವಯ ಮೊದಲ ಹಂತದಲ್ಲಿ 200 ಸಂಖ್ಯಾಬಲದ 05 ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಅಗತ್ಯವಿರುವ ವಿವಿಧ ವೃಂದದ 45 ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

| **ಕ್ರ. ಸಂ** | **ಹುದ್ದೆಯ ವಿವರ** | **200 ಸಂಖ್ಯಾಬಲದ 01 ವಿದ್ಯಾರ್ಥಿ ನಿಲಯಕ್ಕೆ ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ** | **200 ಸಂಖ್ಯಾಬಲದ 05 ವಿದ್ಯಾರ್ಥಿ ನಿಲಯಕ್ಕೆ ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ** | **ನೇಮಕಾತಿ ವಿಧಾನ** |
|---|---|---|---|---|
| 1 | ಅಡುಗೆಯವರು | 04 | 20 | ಹೊರಗುತ್ತಿಗೆ ಆಧಾರದ ಮೇಲೆ |
| 2 | ಅಡುಗೆ ಸಹಾಯಕರು | 04 | 20 | |
| 3 | ರಾತ್ರಿ ಕಾವಲುಗಾರರು | 01 | 05 | |
| | **ಒಟ್ಟು** | **09** | **45** | |

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 526 ಎಫ್ ಆರ್ ಸಿ 2022 (902777), ದಿನಾಂಕ:18-10-2022 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ: ಪ್ರಜಾ ಅಮ್ಮೆಂಬಳ)
ಸರ್ಕಾರದ ಉಪ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4. ಕಲ್ಯಾಣ ಕೇಂದ್ರ, 24/7 helpdesk, ಸಮಾಜ ಕಲ್ಯಾಣ ಇಲಾಖೆ, ಯವನಿಕ ಆವರಣ, ನೃಪತುಂಗ ರಸ್ತೆ, ಡಾ|| ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ
3. ಸರ್ಕಾರದ ಉಪ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸಸೌಧ.

*****

FD/526/FRC/2022-FRC-FINANCE DEPT.SEC

27314/2022

ಆಇ 526 ಎಫ್‌ಆರ್ ಸಿ 2022 (902777)

ಆಇ 579 ವೆಚ್ಚ-3 2022 (880173)

SWD 188 PKV 2022 (713563)

SWD/EDU/ED6/110/2022 (827869)

ಆರ್ಥಿಕ ಇಲಾಖೆ

ವಿತ್ತೀಯ ಸುಧಾರಣೆ ಕೋಶ

ದಿನಾಂಕ: 18-10-2022

ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. 2022-23ನೇ ಸಾಲಿನ ಆಯವ್ಯಯ ಕಂಡಿಕೆ 154 ರನ್ವಯ ಮೊದಲ ಹಂತದಲ್ಲಿ 200 ಸಂಖ್ಯಾಬಲದ 05 ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಅಗತ್ಯವಿರುವ ವಿವಿಧ ವೃಂದದ 45 ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಲು ಆರ್ಥಿಕ ಇಲಾಖೆಯು ಸಹಮತಿಸಿದೆ .

| ಕ್ರ.ಸಂ. | ಹುದ್ದೆಯ ವಿವರ | 200 ಸಂಖ್ಯಾಬಲದ 01 ವಿದ್ಯಾರ್ಥಿ ನಿಲಯಕ್ಕೆ ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | 200 ಸಂಖ್ಯಾಬಲದ 05 ವಿದ್ಯಾರ್ಥಿ ನಿಲಯಕ್ಕೆ ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|---|
| 1 | ಅಡುಗೆಯವರು | 04 | 20 | ಹೊರಗುತ್ತಿಗೆ ಆಧಾರದ ಮೇಲೆ |
| 2 | ಅಡುಗೆ ಸಹಾಯಕರು | 04 | 20 | |
| 3 | ರಾತ್ರಿ ಕಾವಲುಗಾರರು | 01 | 5 | |
| ಒಟ್ಟು | | 09 | 45 | |

(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ ಇವರಿಂದ ಅನುಮೋದಿತ)

Signed by Muralidhar C
Date: 18-10-2022 17:01:19

(ಮುರಳೀಧರ.ಸಿ)
ವಿಶೇಷಾಧಿಕಾರಿ
ಆರ್ಥಿಕ ಇಲಾಖೆ (ಎಫ್.ಆರ್.ಸಿ.& ಸಿ.ಸಿ)

ಸರ್ಕಾರದ ಉಪ ಕಾರ್ಯದರ್ಶಿ (ಕಲ್ಯಾಣ),
ಆರ್ಥಿಕ ಇಲಾಖೆ.